# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 53 |
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 27-01-2026 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು<br>ನಗರ ಯೋಜನೆ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ ಯೋಜನೆಯಡಿ ಸಿಂಧನೂರು ನಗರಕ್ಕೆ 24X7 ಕುಡಿಯುವ ನೀರು ಸರಬರಾಜು ಕಾಮಗಾರಿಯ ಗುಣಮಟ್ಟವನ್ನು ಹಾಗೂ ವಾಸ್ತವಾಂಶಗಳನ್ನು ಪರಿಶೀಲಿಸಲು ಮಾನ್ಯ ಸಚಿವರು ಸದನದಲ್ಲಿ ನೀಡಿರುವ ಭರವಸೆಯಂತೆ ಯಾರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿದೆ; | ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ ಯೋಜನೆಯಡಿ (NKUSIP) ಸಿಂಧನೂರು ನಗರಕ್ಕೆ 24X7 ಕುಡಿಯುವ ನೀರು ಸರಬರಾಜು ಕಾಮಗಾರಿಯನ್ನು ಗುತ್ತಿಗೆ ಅನುಸಾರ ನಿಗಧಿತ ಗುಣಮಟ್ಟದೊಂದಿಗೆ ಯೋಜನಾ ಸಮಾಲೋಚಕರ (Programme Consultants) ಮೇಲುಸ್ತುವಾರಿಯಲ್ಲಿ ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ ಕಾರ್ಯಗತಗೊಳಿಸಲಾಗಿದೆ ಹಾಗೂ ವಾಸ್ತವಾಂಶಗಳನ್ನು ಪರಿಶೀಲಿಸಲು ಯಾವುದೇ ಸಮಿತಿಯನ್ನು ರಚಿಸಿರುವುದಿಲ್ಲ. |
| ಆ) | ಸದರಿ ಸಮಿತಿಯು ನೀಡಿರುವ ವರದಿಯಲ್ಲಿ ಯಾವ ಅಂಶಗಳು ಒಳಗೊಂಡಿದೆ; | |
| ಇ) | ಸದರಿ ಕಾಮಗಾರಿಯು ಸಂಪೂರ್ಣವಾಗಿ ಮುಕ್ತಾಯಗೊಂಡಿದೆಯೇ; | ಎನ್‌ಕೆಯುಎಸ್‌ಐಪಿ ಯೋಜನೆಯಡಿ ಸಿಂಧನೂರು ನಗರದಲ್ಲಿ 24X7 ಕುಡಿಯವ ನೀರು ಸರಬರಾಜು ಕಾಮಗಾರಿಯ ಸಗಟು ನೀರು ಪೂರೈಕೆ ಅಭಿವೃದ್ಧಿ ಸಹಿತ ಗುತ್ತಿಗೆಯನ್ನು ಮೆ\|\| ಎಸ್.ಪಿ.ಎಂ.ಎಲ್ ಇನ್ಫ್ರಾ ಲಿಮಿಟೆಡ್, ನವ ದೆಹಲಿ ರವರಿಗೆ ದಿನಾಂಕ:17-12-2014 ರಂದು ಯೋಜನಾ ಮೊತ್ತ ರೂ.80.66 ಕೋಟಿಗೆ ನೀಡಲಾಗಿದೆ (ಕಾರ್ಯಚರಣೆ ಮತ್ತು ನಿರ್ವಹಣೆ ಮೊತ್ತ ರೂ.18.63 ಕೋಟಿಗಳು). ಪರಿಷ್ಕೃತ ಗುತ್ತಿಗೆ ಯೋಜನಾ ಮೊತ್ತ ರೂ.96.00 ಕೋಟಿ (ಫೇಸ್-1). ಕಾಮಗಾರಿಗಳನ್ನು ಪೂರ್ಣಗೊಳಿಸಲು ಕರಾರಿನಂತೆ ದಿನಾಂಕ:16-06-2017 ಕ್ಕೆ ನಿಗಧಿಪಡಿಸಲಾಗಿತ್ತು.<br><br>ಈ ಕಾಮಗಾರಿಯಡಿ ಸಗಟು ಹಾಗೂ ವಿತರಣಾ ವ್ಯವಸ್ಥೆ ಅಭಿವೃದ್ಧಿ ಮಾಡಲು 2 ಭಾಗಗಳಿರುತ್ತವೆ.<br><br>**(1) ಸಗಟು ಕುಡಿಯುವ ನೀರು ಪೂರೈಕೆ ಕಾಮಗಾರಿ:.** |

| ಕ್ರ ಸ | ಕಾಮಗಾರಿ ವಿವರ | ಗುರಿ | ಪ್ರಗತಿ | ಬಾಕಿ |
|---|---|---|---|---|
| 1 | ಜಲಸಂಗ್ರಹಗಾರ (IR) | 1 | 1 (100%) | -- |
| 2 | ಮೂಲ ಸ್ಥಾವರ | 1 | 1 (100%) | -- |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|

| | | | | |
|---|---|---|---|---|
| 3 | ಯಂತ್ರೋಪಕರಣಗಳು | 2 ಸೆಟ್ | 2 (100%) | -- |
| 4 | 700 MM ವ್ಯಾಸದ BWSC Pipe (ಕಿಮಿ) | 17.5 | 17.50 (100%) | -- |
| 5 | 10 MLD ಜಲಶುದ್ಧೀಕರಣಾಗಾರ | 1 | 1 (95%) | 5% (finishing works) |
| 6 | 500 MM to 250 MM DI Rising Main (km) | 18.3 | 18.3 (100%) | -- |
| 7 | ಮೇಲೆತ್ತರದ ಜಲಸಂಗ್ರಹಗಾರ (10LL-3 nos.+ 5LL – 2 nos.) | 5 | 5 (95%) | ಚಾಲನೆ ಗೊಳಿಸ ಲಾಗಿದೆ. |

ಸಗಟು ಕುಡಿಯುವ ನೀರು ಪೂರೈಕೆ ಕಾಮಗಾರಿಯು 2021 ರಲ್ಲಿ ಪೂರ್ಣಗೊಂಡಿದ್ದು, ಇದರಿಂದ ಸಗಟು ನೀರು ಪೂರೈಕೆಯಲ್ಲಿ 6 ಎಂ.ಎಲ್.ಡಿ ಯಿಂದ 16 ಎಂ.ಎಲ್.ಡಿಗೆ ಹೆಚ್ಚಳವಾಗಿರುತ್ತದೆ. ಪ್ರಸ್ತುತ ನಗರಸಭೆ ವತಿಯಿಂದ ಕಾರ್ಯಚರಣೆ ಮತ್ತು ನಿರ್ವಹಣೆಯನ್ನು ನಿರ್ವಹಿಸಲಾಗುತ್ತಿದೆ.

**2. ವಿತರಣಾ ವ್ಯವಸ್ಥೆ ಕಾಮಗಾರಿ :**
ಕಾಮಗಾರಿಯ ಪ್ರಗತಿ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ. | ಕಾಮಗಾರಿ ವಿವರ | ಗುರಿ | ಪ್ರಗತಿ | ಬಾಕಿ |
|---|---|---|---|---|
| 1 | ವಿತರಣಾ ಜಾಲ (ಹೆಚ್‌ಡಿಪಿಇ) ಕಿ.ಮೀ | 206.07 | | |
| | ಸರಬರಾಜು | | 206.07 100%) | - |
| | ಜೋಡಣೆ | | 205.5 (99.7%) | 1.45 |
| | ಚಾಲನೆ | | 116.96 (56.7%) | 89.54 |
| 2 | ಮನೆ ಸಂಪರ್ಕ(ಸಂಖ್ಯೆ) | 13946 | | |
| | ಸರಬರಾಜು | | 13946 (100%) | - |
| | ಜೋಡಣೆ | | 12733 (91.3%) | 1213 |
| | ಚಾಲನೆ | | 8941 (64.1%) | 5005 |
| 3 | Valves (nos.) | 670 | 251 (37.4%) | 419 |
| 4 | Flowmeters (nos.) | 12 | 9 (75%) | 3 |
| 5 | Instrumentation (nos.) fixing & commissioning | 35 | 0 | 35 |

ನಗರವನ್ನು 7 ವಿತರಣಾ ವಲಯಗಳಾಗಿ ವಿಂಗಡಿಸಲಾಗಿದ್ದು, 2 ವಲಯಗಳಲ್ಲಿ (90%), 2 ವಲಯಗಳಲ್ಲಿ (50%) ಹೊಸ ವಿತರಣಾ ಜಾಲದಿಂದ ನೀರು ಪೂರೈಕೆಯಾಗುತ್ತಿದೆ. ಉಳಿದ 3 ವಲಯಗಳಲ್ಲಿ ವಿತರಣಾ ಜಾಲದಲ್ಲಿ ಲಿಂಕಿಂಗ್ ಕಾಮಗಾರಿಗಳು ಬಾಕಿ ಇರುತ್ತದೆ.

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| | | ಇದುವರೆಗೆ ಒಟ್ಟಾರೆ ಭೌತಿಕವಾಗಿ ಶೇ.85 ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ರೂ.86.74 ಕೋಟಿ ವೆಚ್ಚ ಮಾಡಲಾಗಿದೆ.<br><br>ಡಿಸಂಬರ್-2022 ರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಿದ ಕಾರಣ ಗುತ್ತಿಗೆದಾರರಿಗೆ ಕರಾರಿನ ನಿಯಮಾನುಸಾರ ದಂಡ ವಿಧಿಸಿ ಗುತ್ತಿಗೆ ಕರಾರನ್ನು ರದ್ದುಗೊಳಿಸಲು ಉದ್ದೇಶಿಸಿ Intent to Terminate ನೋಟೀಸು ಜಾರಿಗೊಳಿಸಿ ಬ್ಯಾಂಕ್ ಗ್ಯಾರಂಟಿಗಳನ್ನು ನಗಧೀಕರಿಸಲು ಕ್ರಮವಹಿಸಲಾಗಿತ್ತು.<br><br>ಗುತ್ತಿಗೆದಾರರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಸ್ತುತ ಆರ್ಬಿಟ್ರೇಷನ್ ಪ್ರಗತಿಯಲ್ಲಿದ್ದು, ಬಾಕಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲು ಆರ್ಬಿಟ್ರೇಟರ್ ರವರು ದಿನಾಂಕ:26-05-2025 ರಂದು ಅನುಮತಿಯನ್ನು ನೀಡಿರುತ್ತಾರೆ.<br><br>51ನೇ ಅಧಿಕಾರಯುತ ಸಮಿತಿ ಸಭೆಯಲ್ಲಿ ಬಾಕಿ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಯ ವತಿಯಿಂದಲೇ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿರುತ್ತದೆ. |
| ಈ) | ಇಲ್ಲವಾದಲ್ಲಿ ಯಾವ ಕಾಲಮಿತಿಯೊಳಗೆ ಸಿಂಧನೂರು ನಗರಕ್ಕೆ 24X7 ಕುಡಿಯುವ ನೀರು ಸರಬರಾಜು ಮಾಡುವ ಕಾಮಗಾರಿಯು ಮುಕ್ತಾಯಗೊಳ್ಳುತ್ತದೆ.? | ದಿನಾಂಕ:10-07-2024 ರಂದು ಜರುಗಿದ 51ನೇ ಅಧಿಕಾರಯುತ ಸಮಿತಿ ಸಭೆಯಲ್ಲಿ ಸ್ಥಳೀಯ ಸಂಸ್ಥೆಯ ಬಾಕಿ ವಂತಿಕೆ ಮೊತ್ತ ಹಾಗೂ ಇತರೆ ಸ್ಥಳೀಯ ಸಂಸ್ಥೆಯ Fund ಬಳಸಿ ಕಾನೂನು ತಜ್ಞರ ಸಲಹೆ ಅನುಸಾರ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಗಳಿಂದ ಪೂರ್ಣಗೊಳಿಸಲು ಅನುಮೋದಿಸಿರುತ್ತಾರೆ.<br><br>ಆರ್ಬಿಟ್ರೇಟರ್ ರವರು ದಿನಾಂಕ:26-05-2025 ರಂದು ಬ್ಯಾಂಕ್ ಗ್ಯಾರಂಟಿಗಳನ್ನು ಜೀವಂತವಾಗಿರಿಸಿಕೊಂಡು, ಆರ್ಬಿಟ್ರೇಷನ್ ಇತ್ಯರ್ಥವಾಗುವವರೆಗೆ ಬ್ಯಾಂಕ್ ಗ್ಯಾರಂಟಿಗಳನ್ನು ನಗದೀಕರಿಸಬಾರದು ಎಂಬ ಷರತ್ತಿಗೊಳಪಟ್ಟು ಬಾಕಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅನುಮತಿ ನೀಡಿರುತ್ತಾರೆ.<br><br>ದಿನಾಂಕ:10-07-2024 ರಂದು ಜರುಗಿದ 51ನೇ ಅಧಿಕಾರಯುತ ಸಮಿತಿ ಸಭೆಯ ನಿರ್ದೇಶನದನ್ವಯ KTPP ಮಾನದಂಡಗಳ ಪ್ರಕಾರ ಬಾಕಿ ಕಾಮಗಾರಿಗಳನ್ನು ಸ್ಥಳೀಯ ಸಂಸ್ಥೆಯ ವಂತಿಕೆ ಹಾಗೂ ಇತರೆ ಸಂಪನ್ಮೂಲಗಳಿಂದ ಸ್ಥಳೀಯ ಸಂಸ್ಥೆಯ ವತಿಯಿಂದಲೇ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. |

ಕಡತ ಸಂಖ್ಯೆ:ನಅಇ 11 ಪಿಆರ್‌ಜೆ 2026

(ಬಿ. ಎಸ್. ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು